ತಡಗಣಿ ಗ್ರಾಮದ ಹತ್ತಿರ ಹಾಲು ಸಂಸ್ಕರಣ ಕೇಂದ್ರ

೧೧೪ ಶ್ರೀ ಬಿ. ಎಸ್. ಯಡಿಯೂರಪ್ಪ. (ಶಿಕಾರಿಪುರ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,—

ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪದ ತಡಗಣಿ ಗ್ರಾಮದ ಹತ್ತಿರ ಪ್ರಾರಂಭಿಸಬೇಕೆಂದಿರುವ ಹಾಲು ಸಂಸ್ಕರಣ ಕೇಂದ್ರದ ಯಂತ್ರೋಪಕರಣ ಕೊಳ್ಳಲು ಶಿವಮೊಗ್ಗ ಜಿಲ್ಲಾ ಡಿ. ಆರ್. ಡಿ. ಎಸ್. ಮತ್ತು ಜಿಲ್ಲಾ ಪರಿಷತ್‌ನಿಂದ ಈವರೆಗೆ ಕಟ್ಟಿರುವ ಹಣವೆಷ್ಟು;

ಆ) ಯಂತ್ರೋಪಕರಣಗಳನ್ನು ಖರೀದಿಸಲಾಗಿದೆಯೇ ಹಾಗೂ ಯಾವಾಗ ಶೀಥಲ ಕೇಂದ್ರದ ಕೆಲಸ ಪ್ರಾರಂಭವಾಗುವುದು ;

ಇ) ಈ ಶೀಥಲ ಕೇಂದ್ರದ ಕಟ್ಟಡದ ಕೆಲಸ ಪ್ರಾರಂಭವಾದ ದಿನಾಂಕ ಕಟ್ಟಡದ ಕೆಲಸ ಮುಗಿದ ದಿನಾಂಕ ಹಾಗೂ ಈ ವರೆಗೆ ಈ ಕಟ್ಟಡಕ್ಕೆ ತಗಲಿರುವ ವೆಚ್ಚವೆಷ್ಟು?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸಚಿವರು).—

ಅ) ಶೀಥಲೀಕರಣ ಕೇಂದ್ರದ ಯಂತ್ರೋಪಕರಣಗಳಿಗೆ ಶಿವಮೊಗ್ಗ ಜಿಲ್ಲಾ ಡಿ.ಆರ್.ಡಿ.ಎಸ್. ನವರು ೨೭-೨-೮೬ ರಂದು ೭.೦೦ ಲಕ್ಷ ರೂಪಾಯಿ ನೀಡಿದ್ದಾರೆ. ಇತರೇ ಕಾಮಗಾರಿಗಳಿಗಾಗಿ ಶಿವಮೊಗ್ಗ ಜಿಲ್ಲಾ ಪರಿಷತ್ ೮-೧೨-೮೬ ರಂದು ೩.೧ ಲಕ್ಷ ರೂಪಾಯಿ ನೀಡಿದೆ.

ಆ) ಯಂತ್ರೋಪಕರಣಗಳನ್ನು ಸಂಗ್ರಹಿಸಲಾಗಿದೆ. ೧೯೮೮ರ ಮಾರ್ಚ್ ಅಂತ್ಯದೊಳಗೆ ಪ್ರಾರಂಭಿಸಲಾಗುವುದು.

ಇ) ಶೀಥಲೀಕರಣ ಕೇಂದ್ರದ ಕಟ್ಟಡದ ಕೆಲಸ ೨೬-೧೦-೮೧ರಂದು ಪ್ರಾರಂಭವಾಗಿದೆ. ಕಟ್ಟಡದ ಕೆಲಸವು ೯-೧೦-೮೬ರಂದು ಪೂರ್ತಿಯಾಗಿದೆ. ಈ ವರೆಗೆ ಕಟ್ಟಡಕ್ಕೆ ೩.೬೫ ಲಕ್ಷ ರೂಪಾಯಿ ವೆಚ್ಚವಾಗಿದೆ.

ಶ್ರೀ ಬಿ. ಎಸ್, ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಕಳೆದ ಎರಡು ವರ್ಷಗಳಿಂದ ಸುಮಾರು ೧೦ ಬಾರಿ ಈ ಪ್ರಶ್ನೆ ಕೇಳಿದ್ದೇನೆ. ಆದರೆ ಅದೇ ಉತ್ತರವನ್ನು ಈಗಲೂ ಕೊಟ್ಟಿದ್ದಾರೆ. ಕಟ್ಟಡಕ್ಕೋಸ್ಕರ ೨ ವರ್ಷಗಳ ಹಿಂದೆ ೩ ಲಕ್ಷ ೬೫ ಸಾವಿರ ಖರ್ಚು ಮಾಡಿ ವಿಷನರಿಯನ್ನು ತೆಗೆದು ಕೊಂಡರು. ಡಿ.ಆರ್.ಡಿ ಎಸ್ ನಿಂದ ೧೦ ಲಕ್ಷ ಕೊಟ್ಟು ಎರಡು ವರ್ಷ ಕಳೆದಿದ್ದರೂ ಇದುವರೆಗೆ ತಾವು ಮಿಷನರಿಯನ್ನು ಕೊಂಡುಕೊಂಡಿಲ್ಲ. ಯಾವ ಉದ್ದೇಶಕ್ಕಾಗಿ ಅದನ್ನು ಮಾಡಬೇಕೆಂದು ಇದ್ದರೋ ಅದು ಸಫಲವಾಗದಿದ್ದರೆ ರೈತರಿಗೆ ಅನ್ಯಾಯವಾಗುತ್ತದೆ. ಈ ನೀತಿ ಸರಿಯೇ ಎಂಬುದನ್ನು ತಾವು ತಿಳಿಸಬೇಕು. ಎರಡನೆಯದಾಗಿ ನೀವು ಸ್ಪಷ್ಟವಾಗಿ ಹೇಳಿದ್ದೀರಿ. ನಾನು ಇದನ್ನು ತಕ್ಷಣ ಈ ಕಾರ್ಯ ಮುಗಿಸಿಕೊಡುತ್ತೇನೆ ಎನ್ನುವ ಮಾದರಿಯಲ್ಲಿ ಹೇಳಿದ್ದೀರಿ. ಈಗ ವಿಷನರಿ ತರಿಸಬೇಕೆಂದು ಇದೆ, ಹಳೆಯ ಮಿಷನರಿಗಳು ಏನಿದೆ ಅವುಗಳನ್ನು ತೆಗೆದುಹಾಕಿ ಹೊಸ ಮೆಷನರಿಗಳನ್ನು ಮಾರ್ಚ್ ಒಳಗೆ ಫಿಟ್ ಮಾಡಿ ಕೆಲಸ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ? ಈ ರೀತಿ ವಿಳಂಬವಾದರೆ ಇದರಿಂದ ರೈತರಿಗೆ ಅನ್ಯಾಯವಾಗುತ್ತದೆ. ಈ ನೀತಿ ಸರಿಯೇ. ಸಾಮಾನ್ಯ ಜನರು ಕೊಟ್ಟಂತಹ ತೆರಿಗೆಯ ಹಣ ಈ ರೀತಿ ದುರುಪಯೋಗ ಆಗುತ್ತಿರುವುದು ಸರಿಯೇ ?

ಶ್ರೀ ಸಿದ್ದರಾಮಯ್ಯ.—ಶಿಥಿಲೀಕರಣದ ಕೆಲಸ ೧೯೮೫ ರಲ್ಲಿ ಪ್ರಾರಂಭ ಆದುದ್ದು ನಿಜ. ಸರ್ಕಾರ ೪ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಕೆಲಸ ಪ್ರಾರಂಭವಾಯಿತು, ಮತ್ತು ಕೆಲಸವನ್ನು ಪಿಡಬ್ಲ್ಯೂಡಿಗೆ ವಹಿಸಿಕೊಡಲಾಗಿದೆ. ಅದಾದ ಮೇಲೆ ಕಳೆದ ವರ್ಷ ೮೬ನೇ ಡಿಸೆಂಬರ್‌ನಲ್ಲಿ ೧೦ ಲಕ್ಷ ರೂಪಾಯಿಗಳನ್ನು ಗ್ರಾಮಾಭಿವೃದ್ಧಿ ಸಂಸ್ಥೆಯವರು ಕೊಟ್ಟಿದ್ದಾರೆ. ೧೦ ಲಕ್ಷ ರೂಪಾಯಿಗಳನ್ನು ಯಂತ್ರೋಪಕರಣಗಳಿಗಾಗಿ ಖರ್ಚು ಮಾಡಿದ್ದೇವೆ. ಇನ್ನೂ ಹೆಚ್ಚು ಕೆಲಸ ಆಗಬೇಕು ಅದಕ್ಕಾಗಿ ಕಳೆದ ತಿಂಗಳಿನಲ್ಲಿ ಜಿಲ್ಲಾ ಪರಿಷತ್ತಿಗೆ ೩ ಲಕ್ಷ ೧೦ ಸಾವಿರ ಬಂದಿದೆ. ಇದರಿಂದ ನೀರಿನ ಟ್ಯಾಂಕ್, ಚರಂಡಿ ಮತ್ತು ರಸ್ತೆಗಳನ್ನು ಕಟ್ಟುವಕ್ಕೆ ಕೆಲಸ ಮಾಡಬೇಕಾಗಿದೆ. ಯಂತ್ರೋಪಕರಣಗಳೆನ್ನೂ ತೆಗೆದುಕೊಳ್ಳುತ್ತಿದ್ದೇವೆ. ಕಟ್ಟಡದ ಕೆಲಸ ಪೂರ್ಣವಾಗಿದೆ. ೧೯೮೮ರ ಮಾರ್ಚ್ ಒಳಗೆ ಶಿಥಿಲೀಕರಣದ ಕೆಲಸ ಪ್ರಾರಂಭವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ನನ್ನ ಪ್ರಶ್ನೆ ಏನೆಂದರೆ ನೀವು ಏನು ಶಿಥಿಲೀಕರಣ ಕೆಲಸವನ್ನು ಹಾಕಿದ್ದೀರಿ. ಅದನ್ನು ೧೦ ವರ್ಷದ ಆಗತ್ಯದ ಮುಂದಾಲೋಚನೆ ಇಟ್ಟುಕೊಂಡು ಅದಕ್ಕೆ ಬೇಕಾಗಿರುವಂತಹ ದೊಡ್ಡ ಉಪಕರಣಗಳನ್ನು ಹಾಕುತ್ತೀರಾ ? ಅಥವಾ ಇದೇ ವಿಂಚನರಿಗಳನ್ನು ಇಟ್ಟುಕೊಂಡು ಇನ್ನು ನಾಲ್ಕಾರು ವರ್ಷದ ನಂತರ ಮತ್ತೆ ಬದಲಾವಣೆ ಮಾಡುವ ಯೋಚನೆ ಏನಾದರೂ ಇಟ್ಟುಕೊಂಡಿದ್ದೀರಾ, ಈ ರೀತಿ ಮುಂದಾಲೋಚನೆ ಇಟ್ಟುಕೊಂಡು ೧೦ ವರ್ಷಕ್ಕೆ ಕೆಪಾಸಿಟಿಯನ್ನು ಹೊಂದಿರತಕ್ಕ ವಿಂಚನರಿಯನ್ನು ಹಾಕಬೇಕೆಂದು ಯೋಚನೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಸಿದ್ದರಾಮಯ್ಯ.—ಈಗ ಆಗತ್ಯ ಎಷ್ಟು ಇದೆಯೋ ಅಷ್ಟನ್ನೂ ಮಾಡುತ್ತೇವೆ. ಇದಕ್ಕೆ ಹೆಚ್ಚು ಖರ್ಚು ಬೇಕಾಗುವುದಿಲ್ಲ. ಶೈತ್ಯಾಗಾರ ಮಾಡಲಿಕ್ಕೆ ಕಟ್ಟಡವು ಮುಖ್ಯವಾಗಿ ಬೇಕಾಗಿದೆ. ಮುಂದಿನ ಅವಶ್ಯಕತೆ ನೋಡಿಕೊಂಡು ನಾವು ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಕೃಷ್ಣರಾಜೇಂದ್ರ ಹತ್ತಿ ಗಿರಣಿ, ಮೈಸೂರು

೮೪(೯೯೧) ಶ್ರೀ ಪಿ.ಎಂ. ಚಿಕ್ಕಬೋರಯ್ಯ(ಚಾಮರಾಜ).— ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಪ್ರದೇಶದ ಗಿರಣಿ ಕೈಗಾರಿಕೆ ಎನಿಸಿ ಖ್ಯಾತಿಯಾದ ಶ್ರೀ ಕೃಷ್ಣ ರಾಜೇಂದ್ರ ಹತ್ತಿ ಗಿರಣಿ ಮುಚ್ಚಿ ೩ ವರ್ಷಗಳಾಗಿದ್ದು ರಾಜ್ಯ ಸರ್ಕಾರ ಕೆಲವು ಸಲ ಅದರ ಪುನರಾರಂಭದ ಭರವಸೆ ಇತ್ತಿದ್ದಾಗ್ಯೂ ಆ ಗಿರಣಿ ಇನ್ನೂ ಮುಚ್ಚಿದ ಸ್ಥಿತಿಯಲ್ಲೇ ಮುಂದುವರಿಸುತ್ತಿರಲು ಕಾರಣವೇನು ?

ಆ) ಆ ಗಿರಣಿಯಲ್ಲಿ ಕೆಲಸಕ್ಕಿದ್ದ ಸುಮಾರು ೩೦೦೦ ಕಾರ್ಮಿಕ ಕುಟುಂಬಗಳು ಬೀದಿಪಾಲಾಗಿ ನಿರ್ಗತಿಕ ಜೀವನದ ಬವಣೆಗೀಡಾಗಿದ್ದರೂ, ಅವರಿಗೆ ಯಾವ ಪರಿಹಾರವನ್ನು ಈವರೆಗೂ ಕೊಟ್ಟಿಲ್ಲದಿದ್ದಿರುವುದಕ್ಕೆ ಕಾರಣವೇನು ?

ಇ) ಈ ಗಿರಣಿಯನ್ನು ರಾಷ್ಟ್ರೀಕರಣ ಮಾಡುವುದರಿಂದಲಾದರೂ ಪ್ರಕೃತ ಬಿಕ್ಕಟ್ಟನ್ನು ಬಗೆಹರಿಸಲಿಕ್ಕೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ರಾಜ್ಯ ಸರ್ಕಾರವು ಅನೇಕ ಪ್ರಯತ್ನಗಳನ್ನು ಮಾಡಿದರೂ ಮಾಲಿಕರು ಗಿರಣಿಯನ್ನು ಪುನಃ ಆರಂಭಿಸಲು ಒಪ್ಪದೆಯಿರುವುದರಿಂದ ಈ ಕಾರ್ಖಾನೆ ಪುನಾರಾರಂಭ ಮಾಡಲು ಸಾಧ್ಯವಾಗಿಲ್ಲ.

ಆ) ಭವಿಷ್ಯ ನಿಧಿಯಿಂದ ಪ್ರತಿಯೊಬ್ಬ ಕಾರ್ಮಿಕನಿಗೂ ೩೦೨೦ ರೂಪಾಯಿಗಳ ಮುಂಗಡ ಹಣವನ್ನು ಕೊಡಿಸಲಾಗಿದೆ.

ಇ) ರಾಷ್ಟ್ರೀಕರಣ ಮಾಡುವ ಉದ್ದೇಶ ಇಲ್ಲ.

ಶ್ರೀ ಪಿ ಎಂ. ಚಿಕ್ಕಬೋರಯ್ಯ.—ಮಾನ್ಯ ಅಧ್ಯಕ್ಷರೇ, ಮಾಲೀಕರು ಒಬ್ಬರೇ ಪ್ರಾರಂಭ ಮಾಡಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಆಶ್ವಾಸನೆ ಕೊಡುತ್ತಾರೆಯೇ ಅಥವಾ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಇದನ್ನು ಪ್ರಾರಂಭ ಮಾಡಲಿಕ್ಕೆ ವಿಚಾರ ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಟ್ಟರೋ ಗೊತ್ತಾಗಲಿಲ್ಲ. ಇದರ ಜೊತೆಗೆ ನನ್ನ ಮನವಿ ಏನೆಂದರೆ ಸುಮಾರು ೩ ಸಾವಿರ ಕಾರ್ಮಿಕರು ಬೀದಿ ಪಾಲಾಗಿದ್ದಾರೆ, ೩ ಸಾವಿರ ಕುಟುಂಬಗಳು ಅನಾಥರಾಗಿ ಇವೊತ್ತು ಮೈಸೂರು ನಗರದಲ್ಲಿ ಒದ್ದಾಡುತ್ತಿದ್ದಾರೆ, ಅವರಿಗೆ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಆದಷ್ಟು ಬೇಗನೆ ಸಹಾಯ ನೀಡುತ್ತದೆಯೇ, ಸಹಕಾರ ನೀಡುತ್ತದೆಯೇ ಎಂದು ಕೋರಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್,—ಮಾನ್ಯ ಅಧ್ಯಕ್ಷರೇ, ಇದು ಸುಮಾರು ೫೮ ವರ್ಷದ ಹಿಂದೆ ಪ್ರಾರಂಭವಾದ ಕಾರ್ಖಾನೆ, ಮೊದಲಿಂ ಅದು ಖಾಸಗಿಯವರದ್ದು ಆಗಿತ್ತು, ಕಾರಣಾಂತರಗಳಿಂದ